**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 1049/2022**

| | | | |
|---|---|---|---|
| **ಹೆಸರು** | **:** | **ಸುಹಾನಂದ ಸಿಂಗೇ** | **ಚಾ.ಸಾ. 18** |
| **ತಂದೆಯ ಹೆಸರು** | **:** | **ಬೆಣಪ್ಪ** | **ಪ್ರಾ.ಸಾ. 4** |
| **ವಯಸ್ಸು** | **:** | **35 ವರ್ಷ** | **ದಿನಾಂಕಃ 05-11-2024** |
| **ಉದ್ಯೋಗ** | **:** | **PSI** | |
| **ವಾಸಸ್ಥಳ** | **:** | **ಮುಡಬಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕಃ 25-10-2021 ರಿಂದ 30-01-2023 ರವರೆಗೆ ಸುಲೇಪೇಟ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 30-04-2022 ರಂದು ಬೆಳಗ್ಗೆ 3-00 AM ಗಂಟೆ ಸುಮಾರಿಗೆ ಚಾಸಾ 1 ರವರು ನಮ್ಮ ಠಾಣೆಗೆ ಹಾಜರಾಗಿ ಒಂದು ದೂರನ್ನು ಹಾಜರುಪಡಿಸಿದ್ದು, ಸದರಿ ದೂರಿನ ಸಾರಾಂಶದ ಮೇರೆಗೆ ಠಾಣೆ ಗುನ್ನೆ ಸಂಖ್ಯೆಃ 28/2022 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ.

ಈಗ ನೋಡುತ್ತಿರುವ ನಿಪಿ 10 ರ ದೂರಿನಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-10(ಬಿ) ಗುರುತಿಸಲಾಯಿತು. ಸದರಿ ದೂರನ್ನು ಚಾಸಾ 10 ರವರು ಬರೆದಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-19 ಎಂದು ಗುರುತಿಸಲಾಯಿತು. ನಿಪಿ 19 ರ ಪ್ರಥಮ ವರ್ತಮಾನ ವರ್ತಮಾನ್ನು ನ್ಯಾಯಾಲಯಕೆ ಕಳುಹಿಸಿಕೊಟ್ಟು ಮುಂದಿನ ತನಿಖೆಗಾಗಿ ಕಡತವನ್ನು ಪ್ರಾಸಾ 3 ರವರಿಗೆ ಸಲ್ಲಿಸಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ R.R. ವಕೀಲರಿಂದಃ</u>**

ಘಟನಾ ಸ್ಥಳದಿಂದ ಪೋಲಿಸ ಠಾಣೆ 500 ಮೀಟರ ಅಂತರದಲ್ಲಿದೆ. ಗುನೆ ಸ್ಥಳದಿಂದ ಸರಕಾರಿ ಆಸ್ಪತ್ರೆಗೆ ಹೋಗಲು ನಮ್ಮ ಪೋಲಿಸ ಠಾಣೆಯಿಂದ ಹೋಗಬೇಕು ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂಧ ಇಲ್ಲದೇ ಇದ್ದರೂ ಸಹ ಚಾಸಾ 1 ರವರ ಮಾತುಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಚಾಸಾ 1 ರವರಿಗೆ ಪರಿಹಾರ ಹಣ ಕೊಡಿಸುವ ಉದ್ದೇಶದಿಂದ ಸುಳ್ಳು ದೂರನ್ನು ಪಡೆದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ .ದಂ. ಚಿಂಚೋಳಿ.**